## ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 499
02. ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
03. ಉತ್ತರಿಸುವ ದಿನಾಂಕ : 16.09.2021
04. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಪೊಲೀಸ್ ಇಲಾಖೆಯಲ್ಲಿ ಸಿಬ್ಬಂದಿ ಹಾಗೂ ಅಧಿಕಾರಿಗಳು ತಿಂಗಳ 2ನೇ ಮತ್ತು 4ನೇ ಶನಿವಾರವೂ ಕಾರ್ಯನಿರ್ವಹಿಸುತ್ತಿದ್ದರೂ, ಇವರಿಗೆ ವಾರ್ಷಿಕ 15 ಸಾಂದರ್ಭಿಕ ರಜೆ (ಸಿ.ಎಲ್) ನೀಡುವ ಬದಲು 10 ದಿನಗಳ ಸಾಂರ್ಭಿಕ ರಜೆಯನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="3">ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 59 ಹೆಚ್‌ಹೆಚ್‌ಎಲ್ 2019, ದಿ:12.03.2020ರನ್ವಯ ತಿಂಗಳಿನ 2ನೇ ಮತ್ತು 4ನೇ ಶನಿವಾರ ಕಾರ್ಯನಿರ್ವಹಿಸುವ ಶಿಕ್ಷಣ, ಆರೋಗ್ಯ ಹಾಗೂ ಸರ್ಕಾರದ ಇತರೆ ಇಲಾಖೆಗಳ ಸಿಬ್ಬಂದಿಗಳಿಗೆ ವಾರ್ಷಿಕ 15 ಸಿ.ಎಲ್.ಗಳನ್ನು ನೀಡುತ್ತಿರುವ ರೀತಿಯಲ್ಲಿಯೇ ಪೊಲೀಸ್ ಇಲಾಖೆಯ ಅಧಿಕಾರಿ / ಸಿಬ್ಬಂದಿಗಳಿಗೂ ವಾರ್ಷಿಕ 15 ಸಿ.ಎಲ್.ಗಳನ್ನು ನೀಡಲಾಗುತ್ತಿದೆ.</td></tr>
<tr><td>ಆ)</td><td>ತಿಂಗಳ 2ನೇ ಮತ್ತು 4ನೇ ಶನಿವಾರ ಕಾರ್ಯನಿರ್ವಹಿಸದಿರುವ ರಾಜ್ಯ ಸರ್ಕಾರಿ ನೌಕರರಿಗೆ ವಾರ್ಷಿಕ 10 ಸಿ.ಎಲ್ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td></tr>
<tr><td>ಇ)</td><td>ತಿಂಗಳ 2ನೇ ಮತ್ತು 4ನೇ ಶನಿವಾರ ಕಾರ್ಯನಿರ್ವಹಿಸುವ ಸರ್ಕಾರದ ಇತರೆ ಇಲಾಖೆಗಳ ಸಿಬ್ಬಂದಿಗಳಿಗೆ ವಾರ್ಷಿಕ 15 ಸಿ.ಎಲ್.ಗಳನ್ನು ನೀಡುತ್ತಿರುವ ರೀತಿಯಲ್ಲಿಯೇ ಪೊಲೀಸ್ ಇಲಾಖೆಯ ಸಿಬ್ಬಂದಿ ಹಾಗೂ ಅಧಿಕಾರಿಗಳಿಗೂ ವಾರ್ಷಿಕ 15 ಸಿ.ಎಲ್.ಗಳನ್ನು ನೀಡಲು ಸರ್ಕಾರಕ್ಕಿರುವ ತೊಂದರೇಗಳೇನು; (ವಿವರಗಳನ್ನು ಒದಗಿಸುವುದು)</td></tr>
<tr><td>ಈ)</td><td>ಯಾವ ಕಾಲಮಿತಿಯಲ್ಲಿ ಪೊಲೀಸ್ ಇಲಾಖಾ ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ವಾರ್ಷಿಕ 15 ಸಿ.ಎಲ್.ಗಳನ್ನು ಮಂಜೂರು ಮಾಡಲಾಗುವುದು?</td><td>ಉದ್ಭವಿಸುವುದಿಲ್ಲ.</td></tr>
</table>

HD/123/PPS/2021

(ಆರಗ ಜ್ಞಾನೇಂದ್ರ)
ಮಾನ್ಯ ಗೃಹ ಸಚಿವರು